(ಇಂದು ದಿನಾಂಕ:10-07-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಖ್ಯ ವಿಚಾರಣೆ: ಶ್ರೀ ಎಸ್ ಬಿ ಅರ್ಜಿದಾರ ಪರ ವಕೀಲರಿಂದ :-</u>**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.1 | ಪ್ರಥಮ ವರ್ತಮಾನ ವರದಿಯ ದೃಢಿಕೃತ ನಕಲು |
| ನಿ.ಪಿ.2 | ದೂರಿನ ಧೃಡಿಕೃತ ನಕಲು |
| ನಿ.ಪಿ.3 | ಅಂತಿಮ ವರದಿಯ ಧೃಡಿಕೃತ ನಕಲು |
| ನಿ.ಪಿ.4 | ಸ್ಥಳ ಪಂಚನಾಮೆಯ ದೃಢೀಕೃತ ನಕಲು |
| ನಿ.ಪಿ.5 | ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲು |
| ನಿ.ಪಿ.6 | ವಾಹನ ತಪಾಸಣ ವರದಿಯ ಧೃಡಿಕೃತ ನಕಲು |
| ನಿ.ಪಿ-7 | ಬೆಂಗಳೂರು ಸ್ಪರ್ಶ ಆಸ್ಪತ್ರೆಯ ಬಿಡುಗಡೆ ಪತ್ರ |
| ನಿ.ಪಿ-8 | ಕೃಷ್ಣ ಆಸ್ಪತ್ರೆ ಗಂಗಾವತಿ ಇವರು ನೀಡಿರುವ ಅಂಗನ್ಯೂನ್ಯತೆ ಪ್ರಮಾಣ ಪತ್ರ |
| ನಿ.ಪಿ-9 | ಒಟ್ಟು 14 ಆಸ್ಪತ್ರೆಯ ಬಿಲ್ಲುಗಳನ್ನು ಒಟ್ಟಾಗಿ |
| ನಿ.ಪಿ-10 | ಒಟ್ಟು 8 ವೈದ್ಯರ ಸಲಹಾ ಚೀಟಿಗಳು ಒಟ್ಟಾಗಿ |
| ನಿ.ಪಿ-11 | ಒಟ್ಟು 13 ಎಕ್ಸರೇ ಗಳನ್ನು ಒಟ್ಟಾಗಿ |

**<u>ಪಾಟೀ ಸವಾಲುಃ ಶ್ರೀ ಜಿ ಎನ್ ಎದುರುದಾರರ ನಂ. 3 ಪರ ವಕೀಲರಿಂದ.</u>**

1. ನಾನು ಅಪಘಾತವನ್ನು ನೋಡಿರುತ್ತೇನೆ. ಅಪಘಾತವಾದಗ ನಾನು ಕಾರಿನಲ್ಲಿ ಪ್ರಯಾಣಿಸುತ್ತಿದ್ದೆ. ನೀವು ಪ್ರಯಾಣಿಸುತ್ತಿದ್ದ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆ ಕಾರಿಗೆ ಸರಿಯಾದ ದಾಖಲಾತಿಗಳು ಇಲ್ಲದಿದ್ದ ಕಾರಣ ಲಾರಿಯ ಮೇಲೆ ಸುಳ್ಳು ಪ್ರಕರಣ ದಾ ಖಲಿಸಿ ಪರಿಹಾರ ಪಡೆಯಲು ಸುಳ್ಳು ಪಿರ್ಯಾದಿಯನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ಕಾರಿನ ಚಾಲಕ

ಮದ್ಯಪಾನ ಮಾಡಿ ಕಾರನ್ನು ಚಲಾಯಿಸುತ್ತಿದ್ದ ಎಂದರೆ ಸರಿಯಲ್ಲ. ಕಾರಿನ ಚಾಲನು ನಿದ್ದೆಯ ಮಬ್ಬಿನಲ್ಲಿ ಕಾರು ಚಲಾಯಿಸಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

2. ಅಪಘಾತದ ನಂತರ ನಾನು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದೆ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ದಾಖಲಾಗಿದ್ದೆ. ನಾನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಸ್ಪರ್ಶ ಆಸ್ಪತ್ರೆಗೆ ದಾಖಲಾಗಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ತೀವ್ರ ಸ್ವರೂಪದ ಗಾಯಗಳು ಆಗಿರುವುದಿಲ್ಲ ಸಾದಾ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು 20 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ ನಾನು ರೂ.5 ಲಕ್ಷಗಳನ್ನು ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಬಿ.ಇ ವಿದ್ಯಾರ್ಥಿ ಎಂದರೆ ಸರಿ. ನಾನು ಪಿಯುಸಿ ವಿದ್ಯಾರ್ಥಿಗಳಿಗೆ ಟ್ಯೂಶನ್ ಹೇಳುತ್ತಿದ್ದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವುದು ಸುಳ್ಳು ಇದೆ ಎಂದರೆ ಸರಿಯಲ್ಲ. ನಾನು ಬಿ.ಇ. ಸಿವಿಲ್ ವಿದ್ಯಾರ್ಥಿ ಆಗಿದ್ದರಿಂದ ಹೊಸ ಮನೆಗಳಿಗೆ ಬ್ಲೂ ಪ್ರಿಂಟ್ ತಯಾರಿಸುತ್ತಿದ್ದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವುದು ಸುಳ್ಳು ಇದೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ತಿಂಗಳಿಗೆ ರೂ.50,000/- ಸಂಪಾದಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆಯನ್ನು ಪಾವತಿಸಿಲ್ಲ. ನಾನು ಮೊದಲಿನ ಹಾಗೆ ಈಗಲೂ ಸಹ ಎಲ್ಲ ಕೆಲಸಗಳನ್ನು ಸರಿಯಾಗಿ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಗ್ಯವಾಗಿದ್ದು ಎಲ್ಲ ಕೆಲಸಗಳನ್ನು ನಾನೇ ಸ್ವತಃ ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಸ್ಪರ್ಶ ಆಸ್ಪತ್ರೆಯಲ್ಲಿ ಪಡೆದುಕೊಂಡಿಲ್ಲ ಎಂದರೆ ಸರಿ. ನಮ್ಮ ಊರಿಗೆ ಗಂಗಾವತಿ ಹತ್ತಿರವಾಗುವ ಕಾರಣ ಗಂಗಾವತಿಯ ಆಸ್ಪತ್ರೆಯಲ್ಲಿ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ ಎಂದು ಸಾಕ್ಷಿ

ನುಡಿಯುತ್ತಾರೆ. ನಿಪಿ-8 ನ್ನು ನಾನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ನ್ನು ನಾನು ದುಡ್ಡು ಕೊಟ್ಟು ತಂದಿರುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ರೂ.25,00,000/- ಹೆಚ್ಚಿನ ಮೊತ್ತವನ್ನು ಅರ್ಜಿಯಲ್ಲಿ ನಮೂದಿಸಿದ್ದೀರಿ ಎಂದರೆ ಸರಿಯಲ್ಲ. ಅಪಘಾತಕ್ಕೆ ಸಂಬಂಧಪಟ್ಟಂತೆ ದೂರನ್ನು ನನ್ನ ಗಂಡ ಮಲ್ಲನಗೌಡ ನೀಡುತ್ತಾರೆ.

3. ಲಾರಿಗೆ ಸಂಬಂಧಪಟ್ಟ ದಾಖಲೆಗಳು ಸರಿಯಾಗಿ ಇಲ್ಲದ ಕಾರಣ ನಾವು ಅಂದರೆ ಎದುರುದಾರ ನಂ.3 ರವರು ಹೆಚ್ಚಿನ ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಅಪಘಾತದ ದಿನ ಲಾರಿ ಚಾಲಕ ಲಾರಿಯನ್ನು ನಡೆಸುತ್ತಿರಲಿಲ್ಲ, ಸುಳ್ಳು ಪರಿಹಾರ ಪಡೆಯಲು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು